ಇರಬೇಕಾಗುತ್ತದೆ ಕೋರಂ ಇಲ್ಲದಿದ್ದಲ್ಲಿ ಭೂ ನ್ಯಾಯ ಮಂಡಳಿಯಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ ಆದುದರಿಂದ ಚಾಲ್ತಿಯಲ್ಲಿರುವಂತೆ ನಮೂನೆ 7ಎ ಅರ್ಜಿಗಳನ್ನು ಇತ್ಯರ್ಥಪಡಿಸುವ ಅಧಿಕಾರ ಉಪ ವಿಭಾಗಾಧಿಕಾರಿಗಳವರ ಮಟ್ಟದ ಅಧಿಕಾರಿಯವರಿಗೆ ನೀಡಿರುವುದು ಸೂಕ್ತವಾಗಿರುತ್ತದೆ

ಈ) ಪ್ರಶ್ನೆ "ಇ" ಗೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

788(1370) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಪ್ರಾದೇಶಿಕ ಅರಣ್ಯ ವಲಯಗಳು ಯಾವುವು,

ಆ) ಇಲ್ಲಿ ಕೆಲಸ ಮಾಡುತ್ತಿರುವ ವಲಯ ಅರಣ್ಯಾಧಿಕಾರಿಗಳ ಹೆಸರು ಮತ್ತು ವಿವರಗಳೇನು, ಇವರುಗಳು ಎಷ್ಟು ವರ್ಷಗಳಿಂದ ಇದೇ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಇವರುಗಳ ಪೈಕಿ ಯಾವ ಯಾವ ಅಧಿಕಾರಿಗಳ ಮೇಲೆ ಸಾರ್ವಜನಿಕ ದೂರುಗಳು, ಇಲಾಖಾ ವಿಚಾರಣೆಗಳು ಮತ್ತು ಮರಗಳ ಅಕ್ರಮ ಕಡತಲೆಯ ಬಗ್ಗೆ ದೂರುಗಳಿವೆ,

ಇ) ಇವರುಗಳ ಪೈಕಿ ಲೋಂಡಾ ವಲಯದಲ್ಲಿರುವ ವಲಯ ಅರಣ್ಯಾಧಿಕಾರಿಗಳ ವಿರುದ್ಧ ಸ್ಥಳೀಯ ಜನ ಪ್ರತಿನಿಧಿಗಳು ಅವ್ಯವಹಾರ, ಬೆಲೆಬಾಳುವ ಮರಗಳ ಅಕ್ರಮ ಕಡಿತಲೆ ಮತ್ತು ಸಾಗಾಟದ ಬಗ್ಗೆ ಇಲಾಖೆಗೆ ದೂರುಗಳನ್ನು ಸಲ್ಲಿಸಿರುವುದು ನಿಜವಲ್ಲವೇ,

ಈ) ಹಾಗಿದ್ದಲ್ಲಿ, ಈ ದೂರುಗಳ ಆಧಾರದ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ,

ಉ) ಗುರುತರವಾದ ಆಪಾದನೆಗಳನ್ನು ಎದುರಿಸುತ್ತಿದ್ದರೂ ಸಹ ಇವರುಗಳನ್ನು ಇದೇ ಸ್ಥಳದಲ್ಲಿ ಮುಂದುವರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಊ) ಹಾಗಿದ್ದಲ್ಲಿ, ಆಡಳಿತ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಹಲವಾರು ವರ್ಷಗಳಿಂದ ಲೋಂಡಾ ವಲಯ ಹಾಗೂ ಬೆಳಗಾವಿ ಜಿಲ್ಲೆಯ ವಿವಿಧ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರುಗಳನ್ನು ಜಿಲ್ಲೆಯಿಂದ ಹೊರಗಡೆಗೆ ವರ್ಗಾವಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ ಚೆನ್ನಿಗಪ್ಪ (ಅರಣ್ಯ, ಪರಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಪ್ರಾದೇಶಿಕ ಅರಣ್ಯ ವಲಯಗಳ ವಿವರ ಈ ಕೆಳಕಂಡಂತಿದೆ

1	ಬೆಳಗಾವಿ
2	ಲೋಂಡಾ
3	ಗುಜನಾಳ
4	ಕಣಕುಂಬಿ
5	ಖಾನಾಪುರ
6	ನೇಸರ್ಗಿ
7	ನಾಗರಗಾಳಿ
8	ಗೋಲಿಹಳ್ಳಿ
9	ಕಾಕತಿ

ಆ) ಮೇಲಿನ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಲಯ ಅರಣ್ಯ ಅಧಿಕಾರಿಗಳು, ಬೆಳಗಾಂ ಜಿಲ್ಲೆಯಲ್ಲಿ ವಿವಿಧ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸಿದ ವಿವರಗಳು ಈ ಕೆಳಕಂಡಂತಿದೆ

ವಅಅ ಹೆಸರು ಶ್ರೀಯುತರು	ವಿವಿಧ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸಿದ ವಿವರಗಳು		ಇಲಾಖೆ ವಿಹಾರಣೆ/ ದೂರುಗಳ ವಿವರ
ಕಂರಿ ವಿ ಎಫ್	1	98–98 ರಿಂದ ಸಾ ಅ ವಲಯ, ಬೆಳಗಾಂ	ಇಲ್ಲ
	2	05–00 ರಿಂದ ಮಿನಿ ಜೂ ಭೂತರಾಮನಹಟ್ಟಿ	
	3	2006 ರಿಂದ ಈವರಗೆ – ಬೆಳಗಾಂ ವಲಯ	
ಶಿವಾನಂದ ಎಸ್ ತೋಡ್‌ಕರ್	1	2000–05– ನಾಗರಗಾಳಿ ವಲಯ	ಈ ಅಧಿಕಾರಿಯ ವಿರುದ್ಧ ಅರಣ್ಯ ಪ್ರದೇಶದಲ್ಲಿರುವ ಮ್ಯಾಂಗನೀಸ್‌ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾರೆಂಬ ದೂರುಗಳು ಇದ್ದು ಈ ಬಗ್ಗೆ ತನಿಖೆ ನಡೆಸಿ ವರದಿ
-	2	2005 ರಿಂದ ಈವರೆಗೆ – ಲೊಂಡಾ ವಲಯ	

			ಸಲ್ಲಿಸುವಂತೆ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾಂ ವೃತ್ತ, ಬೆಳಗಾಂ ಇವರಿಗೆ ಸೂಚಿಸಲಾಗಿದೆ
ಪಾಟೀಲ್ ಎಸ್ ಬಿ	1	2003-05-ಅರಣ್ಯ ಸಂಚಾರಿ ದಳ ಬೆಳಗಾಂ	ಇಲ್ಲ
	2	2005-07- ಸಾ ಅ ಹುದ್ದೇರಿ	
	3	ಮೇ 2007 ರಿಂದ ಈವರೆಗೆ – ಗುಜನಾಳ ವಲಯ	
ಹೊಸಮನಿ ಎ ಎಫ್	1	98-2000- ಖಾನಾಪುರ ವಲಯ	ಇಲ್ಲ
	2	2001-01 – ಸಾ ಅ ಅಧಣಿ	
	3	2005-06- ನೇಸರ್ಗಿ ವಲಯ	
	4	2006 ರಿಂದ ಈವರೆಗೆ – ಕಣಕುಂಬಿ	
ರವಿ ಕುಮಾರ್ ಎಂ ಎಫ್	1	2006 ರಿಂದ ಈವರೆಗೆ – ಖಾನಾಪುರ ವಲಯ	ಈ ಅಧಿಕಾರಿಯ ವಿರುದ್ಧ ಅವ್ಯವಹಾರಗಳ ದೂರುಗಳು ಇದ್ದು ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾಂ ವೃತ್ತ, ಬೆಳಗಾಂ ಇವರಿಗೆ ಸೂಚಿಸಲಾಗಿದೆ

ಇ) ಹೌದು

ಈ) ಈ ಅಧಿಕಾರಿಯ ವಿರುದ್ಧ ಮಾಡಲಾಗಿರುವ ದೂರುಗಳ ಬಗ್ಗೆ ವಿವರವಾದ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾಂ ವೃತ್ತ, ಬೆಳಗಾಂ ಇವರಿಗೆ ಸೂಚಿಸಲಾಗಿದೆ

ಉ) ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾಂ ವೃತ್ತ, ಬೆಳಗಾಂ, ಇವರಿಂದ ಈ ಅಧಿಕಾರಿಯ ವಿರುದ್ಧ ಮಾಡಲಾದ ದೂರುಗಳ ಬಗ್ಗೆ ತನಿಖಾ ವರದಿ ಬಂದ ನಂತರ ಇವರನ್ನು ಲೊಂಡಾದಿಂದ ವರ್ಗಾಯಿಸುವ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು

ಊ) ಮೇಲೆ ಹೇಳಿದ ವಲಯ ಅರಣ್ಯ ಅಧಿಕಾರಿಗಳ ಪೈಕಿ ಲೊಂಡಾ ಹಾಗೂ ಗೋಲಿಹಳ್ಳಿ ಪ್ರಾದೇಶಿಕ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಲಯ ಅರಣ್ಯ ಅಧಿಕಾರಿಗಳು ಮಾತ್ರ ಸದರಿ ವಲಯದಲ್ಲಿ ಎರಡು ವರ್ಷಗಳ ಸೇವೆ ಸಲ್ಲಿಸಿದ್ದು, ಉಳಿದ ವಲಯ ಅರಣ್ಯ ಅಧಿಕಾರಿಗಳು ಕೇವಲ ಒಂದು ವರ್ಷ ಮಾತ್ರ ಸೇವೆ ಸಲ್ಲಿಸಿರುತ್ತಾರೆ ಸರ್ಕಾರದ ವರ್ಗಾವಣೆ ಮಾರ್ಗಸೂಚಿ ದಿನಾಂಕ 22 11 2001ರ ಪ್ರಕಾರ ವಲಯ ಅರಣ್ಯ ಅಧಿಕಾರಿಗಳನ್ನು ಕನಿಷ್ಠ ಎರಡು ವರ್ಷಗಳವರೆಗೆ ಒಂದು ಹುದ್ದೆಯಲ್ಲಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಬೇಕಾಗಿರುತ್ತದೆ 2007–08ನೇ ಸಾಲಿನಲ್ಲಿ ಸಾರ್ವತ್ರಿಕ ವರ್ಗಾವಣೆಗಳನ್ನು ನಿಷೇಧಿಸಿರುವುದರಿಂದ ಈ ಸಾಲಿನಲ್ಲಿ ವಲಯ ಅರಣ್ಯ ಅಧಿಕಾರಿಗಳ ವರ್ಗಾವಣೆ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಅಧಿಕಾರಿಗಳ ವಿರುದ್ಧ ಗುರುತರವಾದ ಆರೋಪಗಳಿದ್ದಲ್ಲಿ ಅದನ್ನು ಮೇಲಧಿಕಾರಿಗಳಿಂದ ಪ್ರಾದಮಿಕ ತನಿಖೆ ನಡೆಸಿ ಒಂದು ವೇಳೆ ಆರೋಪಗಳು ಮೇಲ್ನೋಟಕ್ಕೆ ಸಾಬೀತಾದಲ್ಲಿ ಅಂತಹವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲು ಹಾಗೂ ಬೇರೆ ಕಡೆಗೆ ವರ್ಗಾಯಿಸಲು ನಿಯಮಗಳಲ್ಲಿ ಅವಕಾಶವಿದೆ ಆದ್ದರಿಂದ, ಮೇಲಿನ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾಂ ವೃತ್ತ, ಬೆಳಗಾಂ ಇವರಿಗೆ ಸೂಚಿಸಿದ್ದು ಅವರಿಂದ ವರದಿ ಬಂದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು

791(724) ಶ್ರೀ ಹಾಲಪ್ಪ ಹೆಚ್ (ಹೊಸನಗರ) ಘನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಿವಮೊಗ್ಗ ಜಿಲ್ಲೆಯಲ್ಲಿ ವಿದರ್ಭ ಪ್ಯಾಕೇಜ್‌ನಡಿಯಲ್ಲಿ ವಿತರಣೆಯಾದ ಹಣದ ಮೊತ್ತವೆಷ್ಟು, (ವಿವರ ನೀಡುವುದು)

ಆ) ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುವ ಜಿಲ್ಲೆಯ ಕೆರೆಗಳಲ್ಲಿ ಹೂಳು ಎತ್ತಲು ಹಾಗೂ ಅವುಗಳ ಅಭಿವೃದ್ಧಿಗೆ ಸರ್ಕಾರ ವೆಚ್ಚ ಮಾಡಿದ ಹಣವೆಷ್ಟು?